2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 134/2023

| | | |
|---|---|---|
| ಸಾಕ್ಷಿದಾರರ ಹೆಸರು | - ಟಿ ಎಸ್ ಹೇಮ್ಲಾನಾಯ್ಕು | ಪಿಡಬ್ಲೂ -1 |
| ತಂದೆಯ ಹೆಸರು | - ಸೇವ್ಯಾನಾಯ್ಕು | ಸಿಡಬ್ಲೂ -2 |
| ವಯಸ್ಸು | - 56 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಜಯಪುರ | |

ದಿನಾಂಕಃ 03.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ಈ ಹಿಂದೆ ನೋಡಿಲ್ಲ. ಚಾಸಾ.1 ಗೊತ್ತು. ಸಹ ಪಂಚರಾದ ಚಾಸಾ.3 ರವರು ಗೊತ್ತಿಲ್ಲ.

2. ಸಾಕ್ಷಿಗೆ ಎರಡು ದಾಖಲೆಗಳಯನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ದಿನಾಂಕ 03.12.2022 ರಂದು ಸಾಕ್ಷಿಯ ಸಮಕ್ಷಮ ಪೊಲೀಸರು ಜರುಗಿಸಿದ್ದಾರೆ ಎಂದು ಹೇಳಲಾದ ಪಂಚನಾಮೆ ಮತ್ತು ಸಾಕ್ಷಿಯ ಸಮಕ್ಷಮ ತಯಾರಿಸಲಾಗಿದೆ ಎಂದು ಹೇಳಲಾದ ಕಚ್ಚಾ ನಕ್ಷೆಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ.2 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ರಿಂದ ನಿಪಿ.1(ಸಿ) ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು.

3. ಈಗ್ಗೆ 1 ವರೆ ವರ್ಷಗಳ ಹಿಂದೆ ಒಂದು ದಿನ ನಂದಿಬಟ್ಟಲು ಗ್ರಾಮದ ಒಂದು ಹೊಲದಲ್ಲಿ ಆನೆ ಸತ್ತಿದ್ದನ್ನು ನೋಡಲು

ಹೋಗಿದ್ದೆನು. ಅಲ್ಲಿ ಆರ್.ಎಫ್.ಒ ಮತ್ತು ಗ್ರಾಮಸ್ಥರು ಸೇರಿದ್ದರು. ಅಲ್ಲಿ ಆನೆ ಸತ್ತು ಬಿದ್ದಿದ್ದನ್ನು ನಾನು ನೋಡಿದೆನು. ನಂತರ ಚಾಸಾ.1 ರವರು ಆನೆಯ ಶವದ ಹತ್ತಿರ ನನ್ನನ್ನು ನಿಲ್ಲಿಸಿ ಫೋಟೋವನ್ನು ತೆಗೆಸಿಕೊಂಡರು.

4. ಮಾರನೇ ದಿನ ತನಿಗೆಬೈಲು ಅರಣ್ಯ ಕಛೇರಿಗೆ ಚಾಸಾ.1 ರವರು ನನ್ನನ್ನು ಕರೆಯಿಸಿ ಮೇಲೆ ಗುರುತಿಸಿದ ಸಹಿಗಳನ್ನು ಆನೆ ಸತ್ತಿದ್ದ ವಿಚಾರಕ್ಕೆ ಎಂದು ಹೇಳಿ ಪಡೆದುಕೊಂಡರು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ಅದನ್ನು ಚಾಸಾ.1 ರವರು ನನಗೆ ಓದಿ ಹೇಳಿಲ್ಲ. ನನ್ನನ್ನು ಹೊರತುಪಡಿಸಿ ಸದರಿ ದಾಖಲೆಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ.

5. ಆನೆ ಸತ್ತು ಬಿದ್ದಿದ್ದ ಸ್ಥಳ ಯಾರಿಗೆ ಸೇರಿದ್ದು ಮತ್ತು ಆನೆ ಅಲ್ಲಿ ಹೇಗೆ ಸತ್ತು ಬಿದ್ದಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಗಿದೆ ಎಂದು ಹೇಳಲಾದ ಮುದ್ದೆ ಮಾಲುಗಳ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿ ಸದರಿ ಸಹಿಯನ್ನು ಎಲ್ಲಿ, ಯಾವಾಗ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ.

6. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಚಾಸಾ.1 ರವರು ಆನೆಯ ಶವದ ಪಕ್ಕದಲ್ಲಿ ನನ್ನನ್ನು ನಿಲ್ಲಿಸಿ ತೆಗೆದುಕೊಂಡಿದ್ದಾಗಿ

ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ಆನೆಯ ಶವ ಮತ್ತು ಚಾಸಾ.1 ರವರ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಸಹ ಚಾಸಾ.1 ರವರು ಆನೆಯು ಸತ್ತು ಬಿದ್ದಿದ್ದ ಹೊಲದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.4 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಯಾವ ವಿಚಾರಕ್ಕೆ ತೆಗೆದುಕೊಳ್ಳಲಾಯಿತು ಮತ್ತು ಅದರಲ್ಲಿ ಕಂಡು ಬರುವ ವಸ್ತುಗಳು ಯಾವುವು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

8. ದಿನಾಂಕ 01.12.2022 ರಂದು ಲಿಂಗದಹಳ್ಳಿ ಪೊಲೀಸರು ನಿಮ್ಮನ್ನು ಮತ್ತು ಚಾಸಾ.3 ರವರನ್ನು ತರೀಕೆರೆ ತಾಲ್ಲೂಕು, ಲಿಂಗದಹಳ್ಳಿ ಹೋಬಳಿ ನಂದಿಬಟ್ಟಲು ಗ್ರಾಮದ ಸರ್ವೆ ನಂಬರ್ 16 ರಲ್ಲಿರುವ 2 ನೇ ಆರೋಪಿಯ ಜಮೀನಿಗೆ ಹೊಂದಿಕೊಂಡಂತೆ ಇರುವ ಅರಣ್ಯ ಇಲಾಖೆಯವರು ತೆಗೆದಿರುವ ಜಾನುವಾರು ನಿರೋಧಕ ಕಂದಕದ ಕೆಳಗೆ ಆನೆ ಸತ್ತು ಬಿದ್ದಿದ್ದ ಸ್ಥಳಕ್ಕೆ ಪಂಚನಾಮೆಯನ್ನು ಜರುಗಿಸಲು ಕರೆಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.1 ರವರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. 2 ನೇ ಆರೋಪಿಯ ಜಮೀನಿನ

ಸುತ್ತ ಕಲ್ಲು ಕಂಬಗಳನ್ನು ನೆಟ್ಟು ಅದಕ್ಕೆ ಕಬ್ಬಿಣದ ತಂತಿಗಳನ್ನು ಎಳೆದು ಅದಕ್ಕೆ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿರುವುದು ಕಂಡು ಬಂತು ಎಂದರೆ ಸರಿಯಲ್ಲ. ದಿನಾಂಕ 29.11.2022 ರಂದು ರಾತ್ರಿ ವೇಳೆಯಲ್ಲಿ ಆಹಾರವನ್ನು ಅರಸಿಕೊಂಡು ಬಂದ ಕಾಡಾನೆ 2 ನೇ ಆರೋಪಿಯ ಜಮೀನಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಕೊಟ್ಟಿದ್ದ ಬೇಲಿಯನ್ನು ಸ್ಪರ್ಷಿಸಿ ಮೃತಪಟ್ಟಿದ್ದು ಕಂಡು ಬಂತು ಎಂದರೆ ಸರಿಯಲ್ಲ. ಸದರಿ ಸ್ಥಳವನ್ನು ಚಾಸಾ.1 ರವರು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಚಾಸಾ.3 ರವರ ಸಮಕ್ಷಮ ನಿಪಿ.1 ರಂತೆ ಬೆಳಿಗ್ಗೆ 7.30 ರಿಂದ 9.40 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲಕ್ಕೆ ಪೊಲೀಸರು ನಮ್ಮ ಸಮಕ್ಷಮ ಹಿಡಿ ಗಾತ್ರದ ಕಾಡು ಜಾತಿಯ ಒಟ್ಟು 10 ಗೂಟಗಳನ್ನು ಮತ್ತು ಅದಕ್ಕೆ ಸುತ್ತಿದ್ದ ಕಬ್ಬಿಣದ ತಂತಿಯನ್ನು ಅಮಾನತುಪಡಿಸಿಕೊಂಡು ಅವುಗಳ ಮೇಲೆ ನಮ್ಮ ಸಹಿಗಳಿರುವ ಚೀಟಿಯನ್ನು ಅಂಟಿಸಿದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ನಿಪಿ.2 ರಂತೆ ಕಚ್ಚಾ ನಕ್ಷೆಯನ್ನು ತಯಾರಿಸಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಜರುಗಿಸಿದ ಸಲುವಾಗಿ ನಿಪಿ.3 ಮತ್ತು ನಿಪಿ.4 ರಂತೆ ಪೊಲೀಸರು ಫೋಟೋಗಳನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

9. ಪೊಲೀಸರು ನಿಮ್ಮ ಮತ್ತು ಚಾಸಾ.3 ರವರ ಸಮಕ್ಷಮ ನಿಪಿ.1 ರಂತೆ ಪಂಚನಾಮೆಯನ್ನು ಜರುಗಿಸಿ, ನಿಪಿ.2 ರಂತೆ ಕಚ್ಚಾ

ನಕ್ಷೆಯನ್ನು ತಯಾರಿಸಿ ನಿಮ್ಮ ಸಹಿಗಳನ್ನು ಪಡೆದುಕೊಂಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ